# ಮನೆಯೊಳಗಾಡೋ ಗೋವಿಂದ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 438
2. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 50
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 143
4. **Note:** Lyrics given without highlights are as per Ref. 1. The wordings given in yellow highlights are as per Ref. 2. The wordings in Ref. 3 are not considered here.
5. **Note:** Singer has followed lyrics as in Ref. 1.

| | |
|---|---|
| ರಾಗ: ಪಂತುವರಾಳಿ ತಾಳ: ಆದಿ | ರಾಗ: ಪಂತುವರಾಳಿ ತಾಳ: ಅಟ |
| | |
| ಮನೆಯೊಳಗಾಡೋ ಗೋವಿಂದ, ನೆರೆ - | ಮನೆಯೊಳಗಾಡೊ ಗೋವಿಂದ, ನೆರೆ - |
| ಮನೆಗಳಿಗೇಕೆ ಪೋಗುವೆಯೋ ಮುಕುಂದ ॥ ಪ ॥ | ಮನೆಗಳಿಗೇಕೆ ಪೋಗುವೆಯೋ ಮುಕುಂದ |
| | |
| ನೊಸಲಿಗೆ ತಿಲಕವನಿಡುವೆ, ಅಚ್ಚ | ನೊಸಲಿಗೆ ತಿಲಕವನಿಡುವೆ, ಅಚ್ಚ |
| ಹೊಸ ಬೆಣ್ಣೆಯನಿಕ್ಕಿ ಕಜ್ಜಾಯ ಕೊಡುವೆ | ಹೊಸ ಬೆಣ್ಣೆಯಿಕ್ಕಿ ಕಜ್ಜಾಯವ ಕೊಡುವೆ |
| ಹೊಸ ಆಭರಣಗಳನಿಡುವೆ, ಮುದ್ದು | ಹಸನಾದಾಭರಣಗಲಿಡುವೆ, ಚಿಕ್ಕ |
| ಹಸುಳೆ ನಿನ್ನನು ನೋಡಿ ಸಂತೋಷ ಪಡುವೆ ॥ 1 ॥ | ಹಸುಳೆ ನಿನ್ನನು ನೋಡಿ ಸಂತೋಷ ಪಡುವೆ |
| | |
| ಅಣ್ಣಯ್ಯ ಬಲರಾಮ ಸಹಿತ, ನೀ - | ಅಣ್ಣಯ್ಯ ಬಲರಾಮ ಸಹಿತ, ನೀ - |
| ನಲ್ಲಲ್ಲಿ ತಿರುಗಾಡುವುದೇನು ವಿಹಿತ | ನಿನ್ನಲ್ಲಿಯಾದರು ಆಡುವುದು ವಿಹಿತ |
| ಹೆಣ್ಣುಗಳೇಕೋ ಸಂಗಾತ, ಎನ್ನ | ಹೆಣ್ಣುಗಳೇಕೋ ಸಂಗಾತ, ರಂಗ |
| ಬಿನ್ನಪವನು ಪರಿಪಾಲಿಸೊ ದಾತ ॥ 2 ॥ | ಬಿನ್ನಪ ಪರಿಪಾಲಿಸೊ ಜಗನ್ನಾಥ |
| | |
| ಚೋರನೆನಿಸಿಕೊಳಲೇಕೋ, ಲಕ್ಷ್ಮೀ - | ಜಾರನೆನಿಸಿಕೊಳಲೇಕೆ ರಂಗ |
| ನಾರಾಯಣನೆಂಬ ಬಿರುದು ನಿನಗೇಕೋ | ಚೋರನೆನಿಸಿಕೊಂಬ ದೂರು ನಿನಗೇಕೆ |
| ವಾರಿಜಾಕ್ಷೆರ ಕೂಟ ಸಾಕೋ, ನಮ್ಮ | ವಾರಿಜಾಕ್ಷಿಯರ ಕೂಡಲೇಕೆ, ನಮ್ಮ |
| ಪುರಂದರ ವಿಠಲ ನೀ ಮನೆಯೊಳಿರಬೇಕು ॥ 3 ॥ | ಪುರಂದರ ವಿಠ್ಠಲ ರಾಯ ಎಚ್ಚರಿಕೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ನೊಸಲಿಗೆ** – ಹಣೆಗೆ.

**ಹೊನ್ನ ಮಿಸುಣಿ** – ಹೊಳೆಯುವ ಬಂಗಾರ.

**ಬಾಹೋದೆ** – ಬರುವುದೆ.

**ವಿಹಿತ** – ಸರಿಯಾದುದು.

**ವಾರಿಜಾಕ್ಷೇರ** – ಚೆಲುವ ಹೆಂಗಳೆಯರ.

**ಕೂಟ** – ಒಡನಾಟ.

**Classification:** Keerthane
**Ankita:** purandara vittala
**Location:** NA
**Category:** Krishna Leele,
**Sub-Category:** Krishna, abharana, mane, mukunda, govinda, benne, koosu, santosha, hennu, Balarama, ADu, binnaha, kalla, gopi,
**Pravachana:** NA
**Explanation:** NA